ಹುಲ್ಲನ್ನು ಬೆಳೆಸಿ ಅದನ್ನು ಸಾಕಷ್ಟು ಪ್ರಮಾಣದಲ್ಲಿ ರೈತರಿಗೆ ಕೊಡಬೇಕು ಎನ್ನುತಕ್ಕ ಸ್ಕೀಂ ಅನ್ನು ಜಾರಿಗೆ ತರುವುದಕ್ಕೆ ಬದ್ಧರಾಗಿದ್ದೇವೆ. ಇದು ಕೇಂದ್ರ ಸರ್ಕಾರದ ಮುಂದಿರುವುದರಿಂದ, ಅವರಿಂದ ಒಪ್ಪಿಗೆ ಬಂದ ಕೂಡಲೇ ಅದನ್ನು ಅಭಿವೃದ್ಧಿ ಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ —ಅಧ್ಯಕ್ಷರೇ, ಇಪತ್ತು ದನದ ಮೇವು ಜಾಸ್ತಿಯಾಗಿದೆ ಎಲ್ಲಾ ಪದಾರ್ಥಗಳ ಬೆಲೆಯೂ ಜಾಸ್ತಿಯಾಗಿರುವುದರಿಂದ ಹಾಲನ್ನು ಕೊಳ್ಳುವ ಬೆಲೆಯನ್ನು ಜಾಸ್ತಿ ಮಾಡಿ ಎಂದು ಹೇಳಿದ್ದೆ.

ಶ್ರೀ ಬೈ. ರಾಮಕೃಷ್ಣ.—ಹಾಲಿನ ಕೊಳ್ಳುವ ಬೆಲೆಯನ್ನು ಜಾಸ್ತಿ ಮಾಡುವುದು ಕರ್ನಾಟಕ ಡೈರಿ ಡೆವಲಪ್‌ಮೆಂಟ್‌ಗೆ ಸಂಬಂಧಪಟ್ಟಿದ್ದು, ಅವರು ಅದನ್ನು ಪರಿಶೀಲನೆ ಮಾಡುತ್ತಿದ್ದಾರೆಂದು ಹೇಳಿದ್ದೇನೆ. ನಾವು ಕೂಡ ಬರೆದು ಕಳುಹಿಸಿಕೊಟ್ಟಿದ್ದೇವೆ.

ಅಧ್ಯಕ್ಷರು.— ಈಗ ಶ್ರೀ ಬಿ. ವಿ. ಬಾವಿಯವರಿಂದ ಗಮನ ಸೆಳೆಯುವ ಸೂಚನೆ.

*(ii) re :—Establishment of City State Bank of India office at Bangalore.*

SRI B. V. BHAVE.—Mr. Speaker Sir, I call the attention of the Minister for Planning and Wakfs to the e tablishment of City State Bank of India Head Office at Bangalore.

† SRI C. M. IBRAH M (Minister for Planning and Wakfs).—Sir, The President and Members of the State Bank of Indi a Employees' Committee for formation of Karnataka Circle have represented to Government for taking up the issue regarding establishment of Local Head Office of State Bank of India for Karnataka at Bangalore. Karnataka is a major state. As per information available with the State Government, there is a Local Head Office of State Bank of India for each of the major States except Karnataka.

The State Bank of India, till recently was establishing Local Head Offices, if, in any State, the number of branches exceeded 150. On this basis, Local Head Offices were opened between 1965 and 1979 at the following places :

Hyderabad (Andhra Pradesh), Ahmedabad (Gujarat)

Bhopal (Madhya Pradesh), and Bhuvaneswar (Orissa)

Though, in Karnataka State, there are 166 branches/offices of State Bank of India, no local head office has been established.

Considering the facts put forth by State Bank of India Employees' Association and from the point of view of better credit planning branch banking policy, effective supervision and regional equity, the State Government has taken up the issue with the Union Finance Minister and also with the Chairman, State Bank of India, Bombay.

In the mean while, "Press Report has been appeared in Deccan Herald, dated 18th March 1981 to the effect that the Union Deputy Minister of Finance, Sri Maganbhai Barot ruled out in the Rajya Sabha the possibility of setting up of Local Head Office of State Bank of India at Bangalore at present."

In this connection, it may be stated that no final reply has been received from the Government of India or from the Chairman, State Bank of India, Bombay The State Government will continue to make its efforts for establishment of the Local Head Office of the Bank at Bangalore.

ಶ್ರೀ ವಿ.ಬಿ. ಭಾವಿ.—ಮಾನ್ಯ ಉಪಾಧ್ಯಕ್ಷರೇ, ಉತ್ತರದಲ್ಲಿ ಮಾನ್ಯ ಮಂತ್ರಿಗಳವರು ಕರ್ನಾಟಕದಲ್ಲಿ ಪ್ರಾದೇಶಿಕ ಕಛೇರಿಗಳು ೧೮ೆಂಕ್ಕೂ ಹೆಚ್ಚು ಕಛೇರಿಗಳು ಇವೆ ಎಂದು ಒಪ್ಪಿಕೊಂಡಿದ್ದಾರೆ. ರಾಜ್ಯ ಸಭೆಯಲ್ಲಿ ಮಾನ್ಯ ಸದಸ್ಯರೊಬ್ಬರು ಕೇಳಿದಂಥ ಪ್ರಶ್ನೆಗೆ, Press Report has appeared in Deccan Herald, dated 18th March 1981 to the effect that the Union Deputy Minister of Finance, Sri Maganbhai Barot ruled out in the Rajya Sabha the possibility of setting up of Local Head Office of State Bank of India at Bangalore at present. ಎಂದು ಹೇಳಿ ಇದನ್ನು ರೂಲ್ಡ್ ಔಟ್ ಮಾಡಿದ್ದಾರೆ. ಈ ರೀತಿಯಾಗಿ ಹೇಳುವುದಕ್ಕೆ ಸಾಕಷ್ಟು ಹಿನ್ನೆಲೆ ಇದೆ. ಭಾರತೀಯ ಸ್ಟೇಟ್ ಬ್ಯಾಂಕ್ ಇದು ಕೇಂದ್ರ ಸರ್ಕಾರದ ಅಧೀನದಲ್ಲಿರತಕ್ಕ ಸಂಸ್ಥೆ. ಆದರೆ ನಮ್ಮ ಕರ್ನಾಟಕದಲ್ಲಿ ಮತ್ತು ಬೆಂಗಳೂರಿನಲ್ಲಿ ಅದರ ಪ್ರಾದೇಶಿಕ ಕಛೇರಿಗಳು ಹೆಲವಾರು ಇವೆ. ಅದರಲ್ಲಿ ಕೆಲಸ ಮಾಡತಕ್ಕ ನೌಕರರು ಇಲ್ಲಿಗೆ ಒಂದು ಲೋಕಲ್ ಹೆಡ್ ಆಫೀಸ್ ಮಾಡಿ ಕೊಡಿ ಎಂದು ಪಟ್ಟು ಹಿಡಿದು ಕೊಂಡಿದ್ದಾರೆ. ಆವರು ಪಟ್ಟು ಹಿಡಿದು ಕೂತಿರುವುದು ಆವರ ಸ್ವಾರ್ಥಕ್ಕಾಗಿ ಏನೂ ಅಲ್ಲ, ಬೆಂಗಳೂರಿನಲ್ಲಿ ಒಂದು ಲೋಕಲ್ ಹೆಡ್ ಆಫೀಸ್ ಆದರೆ ಆದರಿಂದ ಕರ್ನಾಟಕದಲ್ಲಿರಿತಕ್ಕ ಜನರಿಗೆ ಆದರಿಂದ ಸದುಪಯೋಗವಾಗುತ್ತದೆ ಎನ್ನುತಕ್ಕದ್ದೇ ಆವರ ಮೂಲೋದ್ದೇಶ. ಆದುದರಿಂದ ಅವರು ಪಟ್ಟು ಹಿಡಿದು ಕುಳಿತಿದ್ದಾರೆ. ಆದಕ್ಕಾಗಿ ಆವರು ರಾಜ್ಯ ಸಭೆಗೆ ಒಂದು ಅರ್ಜಿಯನ್ನು ಕೊಟ್ಟರು ಅರ್ಜಿಯನ್ನು ಕೊಟ್ಟ ತಕ್ಷಣ ಬಿಪಿನ್‌ದಾಸ್‌ರವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದರು. ಆ ಕಮಿಟಿಯವರು ಬೆಂಗಳೂರಿಗೆ ಬಂದಿದ್ದಾಗ ಇಲ್ಲಿನ ಕೆಲವು ಪ್ರಮುಖ ವ್ಯಕ್ತಿಗಳು ಸಾಕ್ಷ್ಯ ನೀಡಿದ್ದಾರೆ.

ಕಿ–೫೦ ಪಿ.ಎಂ.

ಆದರಲ್ಲಿ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಶ್ರೀ ಎ. ಲಕ್ಷ್ಮೀಸಾಗರ್, ಎಂ.ಎಲ್.ಎ ಶ್ರೀ ಎಂ. ವೀರಪ್ಪ ಮೊಯ್ಲಿ, ಎಂ.ಎಲ್.ಎ. ಶ್ರೀ ಗುಂಡಯ್ಯ ಶೆಟ್ಟಿ, ಎಂ.ಎಲ್.ಸಿ. ಪ್ರೊ. ವಿ.ಕೆ. ಗೋಕಾಕ್, ಬೆಂಗಳೂರು ವಿಶ್ವವಿದ್ಯಾನಿಲಯ, ಮತ್ತು ಶ್ರೀ ಟಿ. ಪಾಂಡುರಂಗರಾವ್, ಚೀಫ್ ರೀಜನಲ್ ಮ್ಯಾನೇಜರ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ಬೆಂಗಳೂರ: ಈ ಆರು ಮಂದಿ ಇದ್ದಾರೆ. ಆವರ ಪೈಕಿ ಶ್ರೀ ಟಿ. ಪಾಂಡುರಂಗರಾವ್‌ರವರೊಬ್ಬರನ್ನು ಬಿಟ್ಟರೆ ಮಿಕ್ಕ ೫ ಜನರು ಲೋಕಲ್ ಹೆಡ್ ಆಫೀಸ್‌ಬೇಕು ಎಂದು ಸಾಕ್ಷಿ ನುಡಿದಿದ್ದಾರೆ. The Chief Secretary to the Government of Karnataka also expressed himself in support of the prayer of the petitioners Although, according to him, there was no difficulty under the existing arrangement, but from the point of view of having better banking facilities for the backward areas of the State, it was necessary that the State Bank of India took over the responsibility of providing such facilities where the same did not exist and establishment of a local head office, in his opinion, would help to achieve this objective. He

was also in favour of the proposal, as he felt that the grievances of the bank employees and other sectors who were directly involved in this could be minimised to some extent. ಈ ತರಹ ಎಲ್ಲರೂ ತಮ್ಮ ಸಾಕ್ಷಿಯನ್ನು ನುಡಿದಿದ್ದಾರೆ. ನಮಗೆ ಬಂದಿರುವ ಒಂದು ಸಂಶಯ ಏನೆಂದರೆ, ಆಪಿಟಿಷನ್ ಕಮಿಟಿಯವರು ಬೆಂಗಳೂರಿನಲ್ಲಿ ಮುಖ್ಯ ಕಛೇರಿಯನ್ನು ಸ್ಥಾಪಿಸಬೇಕಾದ ಅಗತ್ಯ ಇಲ್ಲವೆಂಬ ಅಭಿಪ್ರಾಯಕ್ಕೆ ಬಂದಿದ್ದಾರೆ ಎಂದು. ಆ ರೀತಿ ಅಭಿಪ್ರಾಯಕ್ಕೆ ಬರಲು ಕಾರಣವೇನೆಂದರೆ ಕರ್ನಾಟಕದಲ್ಲಿ ಆಷ್ಟೊಂದು ವ್ಯವಹಾರ ಬೆಳೆದಿಲ್ಲ ಎಂದು ಆ ಅಭಿಪ್ರಾಯಕ್ಕೆ ಬಂದಿದ್ದಾರೆ. ಇದರಿಂದ ನಮ್ಮ ಕನ್ನಡಿಗರಿಗೆ ಮುಖಭಂಗವಾಗಿದೆ. ತಮಿಳ್ನಾಡು, ಕೇರಳ, ಮಲೆಯಾಳದವರೆಲ್ಲ ಇದಕ್ಕೆ ಕಾರಣರಾಗಿರಬಹುದು. ಇಲ್ಲದಿದ್ದರೆ ಹೆಡ್ ಆಫೀಸ್ ಸ್ಥಾಪನೆಯಾಗುತ್ತಿತ್ತು.

ಅಧ್ಯಕ್ಷರು.—ಸುಮ್ಮನೆ ಇಲ್ಲಸಲ್ಲದ ಆರೋಪಣೆಗಳಿಂ ಬೇಡ. ನಮಗೆ ಏತಕ್ಕೆ ಆಗಬೇಕೆಂಬುದನ್ನು ಹೇಳಿ.

ಶ್ರೀ ವಿ.ಬಿ. ಭಾವಿ.—ಏಕೆ ಆಗಿಲ್ಲ ಎಂಬುದಕ್ಕೆ ಉದಾಹರಣೆ ಕೊಡುತ್ತಿದ್ದೇನೆ.

ಅಧ್ಯಕ್ಷರು.—ಅದು ಸೂಕ್ತವಲ್ಲ.

ಶ್ರೀ ವಿ.ಬಿ. ಭಾವಿ.—ನನಗೆ ತಿಳಿದ ಮಟ್ಟಿಗೆ ಇದರ ಹಿನ್ನೆಲೆಯನ್ನು ನೋಡಿದರೆ ತಮಿಳ್ನಾಡಿನವರಿಗೆ ಮತ್ತು ಕೇರಳದವರಿಗೆ ಇಲ್ಲಿ ಆ ಒಂದು ಕಛೇರಿ ಆಗಬಾರದೆಂಬ ಭಾವನೆ ಇದೆ. ಬ್ಯಾಂಕಿನವರು ಕೂಡ ಇದಕ್ಕೆಲ್ಲ ಸಾಕಷ್ಟು ರೂಲ್ಸನ್ನು ಹಾಕಿದ್ದಾರೆ ೫೦೦ ಶಾಖೆಗಳನ್ನು ತೆರೆದರೆ ಲೋಕಲ್ ಹೆಡ್ ಆಫೀಸ್ ಮಾಡಬಹುದು ಮತ್ತು ಆದಕ್ಕೆ ೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆಂಬ ಸಮಸ್ಯೆಗಳನ್ನು ಇಟ್ಟಿದ್ದಾರೆ. ಆದರೆ ಹೈದರಾಬಾದಿನಲ್ಲಿ ಕೇವಲ ೬೫ ಶಾಖೆಗಳಿದ್ದವು. ಶ್ರೀ ಬಹ್ಮಾನಂದ ರೆಡ್ಡಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಅಲ್ಲಿ ಒಂದು ಲೋಕಲ್ ಹೆಡ್ ಆಫೀಸನ್ನು ತೆಗೆದರು ಭುವನೇಶ್ವರದಲ್ಲಿ ೧೯೦ ಶಾಖೆಗಳಿದ್ದಾಗ್ಗೆ ಶ್ರೀ ಬಿಜು ಪಟ್ನಾಯಕ್‌ರವರು ಕೇಂದ್ರದ ಮಂತ್ರಿಗಳಾಗಿದ್ದರು. ಆಗ ಅಲ್ಲಿ ಒಂದು ಹೆಡ್ ಆಫೀಸನ್ನು ತೆಗೆದರು. ಮುಂದೆ ಪಿಟಿಷನ್ ಕಮಿಟಿಯಲ್ಲಿ ಛೇರ್ಮನ್ನರು ಈ ರೀತಿ ಹೇಳಿದ್ದಾರೆ.

> "The representatives of the Ministry of Finance also expressed a fear that if the regional office at Bangalore is converted into a local head office, there would be irresistible pressure from each State Government and particularly those of the North-eastern States for a local head office of the State Bank to begin with and probably similar demands will come with respect to other banks as a whole."

ಹೆಡ್ ಆಫೀಸನ್ನು ಕೊಡಬೇಕಾಗುತ್ತದೆಂಬ ಅಭಿಪ್ರಾಯವನ್ನು ಛೇರ್ಮನ್ನರು ವ್ಯಕ್ತಪಡಿಸಿದ್ದಾರೆ. ಹೀಗೆ ಸಮಿತಿ ವರದಿ ಕೊಟ್ಟನಂತರ ೭ ಸಣ್ಣ ಸಣ್ಣ ಆರ್ಜಿಗಳನ್ನು ಸಲ್ಲಿಸಿದ ಬಳಿಕ ಹೆಡ್ ಆಫೀಸನ್ನು ಕೊಟ್ಟಿದ್ದಾರೆ ಈ ಕರ್ನಾಟಕಕ್ಕೆ ಯಾವ ರೀತಿಯ ಬ್ಯಾಂಕಿಂಗ್ ಘೋರಣೆ ಇದೆ ಎಂದು ಕೇಳುತ್ತಿದ್ದೇನೆ. ಅಸ್ಸಾಮಿಗೆ ಲೋಕಲ್ ಹೆಡ್ ಆಫೀಸ್ ಕೊಟ್ಟಿದ್ದಾರೆ. ಬ್ಯಾಂಕಿನ ನೌಕರರು ಬ್ಯಾಂಕಿನ ಸಲುವಾಗಿ ಬಡಿದಾಡುತ್ತಿಲ್ಲ. ಆದರೆ ಕರ್ನಾಟಕ ಜನರಿಗೆ ಯಾವ ರೀತಿ ಅನ್ಯಾಯವಾಗುತ್ತಿದೆ. ಕನ್ನಡಿಗರ ಮೇಲೆ ಹೊರಗಿನವರು ಯಾವ ರೀತಿ ಭಾವನೆ ವ್ಯಕ್ತ ಪಡಿಸುತ್ತಿದ್ದಾರೆಂಬುದನ್ನು ಗಮನಿಸಬೇಕಾಗಿದೆ.

ಅಧ್ಯಕ್ಷರು.—ಇಲ್ಲಿಗೆ ಬ್ಯಾಂಕು ಬೇಕು ಎಂದು ಹೇಳಿ. ಅದನ್ನು ಬಿಟ್ಟು ಏನೇನೋ ಹೇಳುವುದು ಏಕೆ ?

SRI V.B. BHAVI.—The Deputy Finance Minister has ruled out this in Rajya Sabha.

ಅಧ್ಯಕ್ಷರು.—ಆ ವಿಷಯ ಕೂಡ ಗೊತ್ತಿದೆ.

ಶ್ರೀ ವಿ.ಬಿ. ಭಾವಿ.—ಇಲ್ಲಿ ಒಂದು ಹೆಡ್ ಆಫೀಸನ್ನು ಸ್ಥಾಪನೆ ಮಾಡದಿದ್ದರೆ ಯಾವ ರೀತಿ ಅನ್ಯಾಯವಾಗುತ್ತದೆಂಬುದಕ್ಕೆ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಅದನ್ನು ಹೇಳುವಾಗ ಏನೇನೋ ಹೇಳಬಾರದು.

ಶ್ರೀ ವಿ.ಬಿ. ಭಾವಿ.—ಇವತ್ತಿನ ದಿವಸ ಜಯಮಹಲ್‌ನಲ್ಲಿರತಕ್ಕ ಬ್ಯಾಂಕಿನಲ್ಲಿ ನೌಕರಿಯ ಸಲುವಾಗಿ ಸಂದರ್ಶನ ನಡೆಯುತ್ತಿದೆ. ಆ ಸಂದರ್ಶನ ಸಮಿತಿಯಲ್ಲಿ ಇರತಕ್ಕ ೧೨ ಮಂದಿ ಸದಸ್ಯರೂ ತಮಿಳರಾಗಿದ್ದಾರೆ. ಅವರು ಕೇವಲ ೪ ಪರ್ಸೆಂಟ್ ಕನ್ನಡಿಗರಿಗೆ ಮತ್ತು ಶೇಕಡ ೬೦ರಷ್ಟು ತಮಿಳರು ಮತ್ತು ಕೇರಳದವರಿಗೆ ಇಂಟರ್‌ವ್ಯೂ ಕಳುಹಿಸಿದ್ದಾರೆ. ಅವರೆಲ್ಲ ಕರ್ನಾಟಕದ ಸ್ಟೇಟ್ ಬ್ಯಾಂಕಿನಲ್ಲಿ ನೌಕರಿ ಮಾಡತಕ್ಕ ಜನರು. ಇಲ್ಲಿ ಕನ್ನಡಿಗರು ಬಾಯಿ ಮುಚ್ಚಿಕೊಂಡು ಕುಳಿತರೆ ಆ ಅನ್ಯಾಯವನ್ನು ಪ್ರತಿಭಟಿಸತಕ್ಕ ಹಕ್ಕು ನಮಗೆ ಇಲ್ಲವೇ ? ಗುಜರಾತಿನಲ್ಲಿ ೬೮ ಶಾಖೆಗಳಿವೆ, ಅಲ್ಲಿ ಕೂಡ ಒಂದು ಮುಖ್ಯ ಕಛೇರಿಯನ್ನು ತೆಗೆದುಕೊಂಡಿದ್ದಾರೆ. Karnataka is the fifth biggest State in the country. State Bank of India is the biggest bank in respect of foreign exchange ಓವರ್‌ಸೀಸ್ ಬ್ಯಾಂಕ್ ಹೆಡ್ ಆಫೀಸ್ ಇದ್ದಾಗ್ಯೂ ಏಪ್ರಿಲ್ ಮೊದಲ ವಾರದಲ್ಲಿ ಪಂತೊಂದು ಓವರ್‌ಸೀಸ್ ಬ್ಯಾಂಕ್ ಸ್ಥಾಪನೆಯಾಗುತ್ತದೆ. ಇವತ್ತು ನಮ್ಮಲ್ಲಿ ಕಛೇರಿ ಸ್ಥಾಪನೆ ಮಾಡಲು ೧೩ ಏಕರೆ ಜಮೀನು ಸ್ಟೇಟ್ ಬ್ಯಾಂಕಿನ ಸ್ವಾಧೀನದಲ್ಲಿದೆ. ಅವರು ಇದಕ್ಕೆ ೨ ಕೋಟಿ ರೂಪಾಯಿ ವಿಚ್ರ್ ಬರುತ್ತದೆಂದರು. ಆದರೆ ಅಷ್ಟು ಬರುವುದಿಲ್ಲ ಕೇವಲ ೬೩ ಲಕ್ಷ ರೂಪಾಯಿ ಬರುತ್ತದೆ. ಸ್ಟೇಟ್ ಬ್ಯಾಂಕಿನ ವಾರ್ಷಿಕ ಆದಾಯ ೨೬೫ ಕೋಟಿ ರೂಪಾಯಿ ಇದೆ. ಆದರಲ್ಲಿ ಶೇಕಡ ಒಂದರಷ್ಟು ಹಣವನ್ನು ಈ ಹೆಡ್ ಆಫೀಸ್ ಸ್ಥಾಪನೆ ಮಾಡಲು ಉಪಯೋಗಿಸಿದರೆ ಆದರಿಂದ ಏನು ಕೆಡಕಾಗುತ್ತದೆ ? ಕೊನೆಯದಾಗಿ ಹೊನ್ನೆ ಮಾನ್ಯ ಹಣಕಾಸಿನ ಮಂತ್ರಿಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಬ್ಯಾಂಕ್ ಎಂಪ್ಲಾಯೀಸ್ ಕ್ಲಾನ್‌ಫರೆನ್ಸಿಗೆ ಬಂದಿದ್ದಾಗ ಹೊಸ ವರ್ಷದ ಕೊಡುಗೆಯಾಗಿ ಲೋಕಲ್ ಹೆಡ್ ಆಫೀಸನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದರು. ಈಗಾಗಲೇ ಕ್ರಿಶ್ಚಿಯನ್ ಕ್ಯಾಲೆಂಡರ್ ಪ್ರಕಾರ ಹೊಸ ವರ್ಷ ಪ್ರಾರಂಭವಾಗಿ ೩ ತಿಂಗಳಾಯಿತು. ಆದ್ದರಿಂದ, ಹಿಂದೂ ಕ್ಯಾಲೆಂಡರ್ ಪ್ರಕಾರವಾದರೂ ಲೋಕಲ್ ಹೆಡ್ ಆಫೀಸನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಸಿ ಎಂ. ಇಬ್ರಾಹಿಂ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಕಳಕಳಿಯನ್ನು ಇಟ್ಟುಕೊಂಡೇ ಮಾನ್ಯ ಮುಖ್ಯ ಮಂತ್ರಿಗಳು ಬ್ಯಾಂಕಿನ ಅಧ್ಯಕ್ಷರಿಗೆ ಪತ್ರ ವ್ಯವಹಾರ ನಡೆಸಿದ್ದಾರೆ. ಇದುವರೆಗೆ ಸುಮಾರು ೪ ಪತ್ರ ವ್ಯವಹಾರ ನಡೆದಿದೆ. ಇತ್ತೀಚೆಗೆ ಜನವರಿಯಲ್ಲಿ ಒಂದು ಪತ್ರ ಬರೆದಿದ್ದಾರೆ. ಆದರೆ ಅದಕ್ಕೆ ಉತ್ತರ ಬರಲಿಲ್ಲ. ೪ನೇ ತಾರೀಖು ಹೇಗೂ ಮಾನ್ಯ ಮುಖ್ಯ ಮಂತ್ರಿಗಳು ಪ್ಲಾನಿಂಗ್ ಕಮೀಷನ್ ಮೀಟಿಂಗಿಗೆ ಹೋಗುತ್ತಿದ್ದಾರೆ. ಆಗ ಸಂಬಂಧಪಟ್ಟ ಅಧ್ಯಕ್ಷರೊಡನೆ ಪೂರಾ ಮಾತುಕತೆ ನಡೆಸಿ ರಾಜ್ಯ ಸರ್ಕಾರದ ಭಾರವನ್ನು ಕೇಂದ್ರ ಸರ್ಕಾರದ ಮೇಲೆ ಹೇರುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ಹೇಳುತ್ತೇನೆ.

## ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಪಿಚ್. ಗಂಗಾಧರನ್.—ಮೈಸೂರಿನ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ನೌಕರರ ಸಂಘದ ಅಧ್ಯಕ್ಷರು ಸಹಿ ಮಾಡಿದ ಅರ್ಜಿಯನ್ನು ಸಭೆಗೆ ಒಪ್ಪಿಸಲಿಕ್ಕೆ ಇಚ್ಛಿಪಡುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಒಪ್ಪಿಸಲಾಗಿದೆ.

ಶ್ರೀ ಪಿಚ್. ಗಂಗಾಧರನ್.—ಸಹಕಾರಿ ಬ್ಯಾಂಕು ಹಾಗೂ ಸಂಘಗಳಲ್ಲಿ ಹರಿಜನರನ್ನು ನೇಮಿಸುವಂತೆ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಸಂಘದ ಅಧ್ಯಕ್ಷರು ಸಹಿ ಮಾಡಿದ ಅರ್ಜಿಯನ್ನು ಸಭೆಗೆ ಒಪ್ಪಿಸಲಿಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಒಪ್ಪಿಸಲಾಗಿದೆ.